ಮಾಡಿದರು ಕೂಡ ಅವರಿಗೆ ರಕ್ಷಣೆ ಕೊಡಬೇಕು. ಕ್ರಿಟಿಸೈಜ್ ಮಾಡುವುದಾದರೆ ಇನ್ನೊಂದು ಕಡೆ ಮಾಡಲಿ, ಮಂತ್ರಿಗಳನ್ನು ಬಯ್ಯುವುದಿಲ್ಲವೇ, ಕಾಂಗ್ರೆಸ್‌ನವರನ್ನು ಬಯ್ಯುವುದಿಲ್ಲವೇ ? ಅವರಿಗೆ ಏನು ಮಾಡ ವುದಕ್ಕಾಗುತ್ತದೆ ? ನಮಗೆ ಶಕ್ತಿ ಇದ್ದರೆ ನಾವೂ ಉತ್ತರ ಕೊಡುತ್ತೇವೆ ಇಲ್ಲದೆ ಇದ್ದರೆ ಬಿಡಬೇಕಾಗುತ್ತದೆ. ಹೀಗೆ ಪ್ರಜಾಪ್ರಭುತ್ವದಲ್ಲಿ ನಡೆಯಬೇಕು.

ಶ್ರೀ ಎಚ್. ಡಿ. ದೇವೇಗೌಡ;— ಸಭೆಯೊಳಗೆ ಬಂದು ಯಾತೂ ಕೂಗಿಲ್ಲ: ಸಭೆಯ ಹೊರಗಡೆ ಕೂಗಿದ್ದಾರೆ,

ಶ್ರೀ ಡಿ. ದೇವರಾಜ ಅರಸ್;— ಸಭೆಯ ಒಳಗೆ ಬಂದು ಕೂಗಿದ್ದಾರೆ. ಆ ರೀತಿ ಕೂಗಿದವರನ್ನು ಹೊರಗಡೆ ಕಳುಹಿಸಿದ್ದಾರೆ. ನಂತರ ಮಂತ್ರಿಗಳು ಹೊರಗಡೆ ಬಂದನಂತರ ಅವರನ್ನು ಮುಂದೆ ಹೊಗ ದಂತೆ ತಡೆಗಟ್ಟುವುದಕ್ಕೆ ಕೆಲವರು ಹೊರಟಾಗ ಅವರನ್ನು ಪೋಲೀಸಿನವರು ಜೇಸ್ ಮಾಡಿದ್ದಾರೆ. ಆಗ ಪೋಲೀಸಿನವರು ತಮ್ಮ ಫೋರ್ಸ್ ಯೂಸ್ ಮಾಡಿದ್ದಾರೆ. ಆಗ ಕೆಲವರಿಗೆ ಏಟು ಬಿದ್ದಿರಬಹುದು.

ಶ್ರೀ ಎಸ್. ಬಂಗಾರಪ್ಪ:— ಇದೇ ವಿಷಯದಲ್ಲಿ ನನಗೆ ಒಂದು ಸಂದೇಹ ಬಂದಿದೆ. ಏನೆಂದರೆ ಪತ್ರಿಕೆಗಳಲ್ಲಿ ಬಂದಿರುವ ವರದಿಯ ಪ್ರಕಾರ ಯಾರೂ ಹೊಡೆದಾಟಕ್ಕೆ ಹೋಗಿಲ್ಲ; ಏನಿದ್ದರೂ ಅವರ ವಿರುದ್ಧವಾಗಿ ಘೋಷಣೆಗಳನ್ನು ಕೂಗಿದ್ದಾರೆ. ಅದೇ ಕಾರಣದಿಂದ ಪೋಲೀಸಿನವರು ಅವರನ್ನು ಹೊಡೆ ದಿದ್ದಾರೆ. ನನಗೆ ಒಂದು ಫೋಟೋ ಸಹ ಕಳುಹಿಸಿ ಕೊಟ್ಟಿದ್ದಾರೆ. ಅದನ್ನು ತಮ್ಮ ಕಡೆಗೆ ಕಳಿಸಿಕೊಡು ತ್ತೇನೆ; ಪೋಲೀಸಿನವರು ಹೊಡೆದಿದ್ದರಿಂದ ಮೈಮೇಲೆಲ್ಲಾ ಗಾಯಗಳಾಗಿ ಬಟ್ಟೆಯೆಲ್ಲಾ ರಕ್ತದ ಕಲೆಗಳಿಂದ ಕೂಡಿದೆ. ಕೆಲವರನ್ನು ಆಸ್ಪತ್ರೆಗೆ ಅಡ್ಮಿಟ್ ಮಾಡಲಾಗಿದೆ. ಇಂತಹ ಒಂದು ವಾತಾವರಣವನ್ನು ಪೋಲೀಸಿನವರು ಏತಕ್ಕೆ ಸೃಷ್ಟಿ ಮಾಡಿದರು ಎಂಹು ಹೇಳತ್ತೇನೆ? ವಿನಾಕಾರಣ ಹೊಡೆದಿದ್ದಾರೆ, ಘೋಷಣೆ ಕೂಗಿದ ಮಾತ್ರಕ್ಕೆ ಹೊಡೆಯುವುದುಸರಿಯೇ ? ಆದು ಸರಿಯಲ್ಲ ಎಂಬುದು ಎಲ್ಲರ ಭಾವನೆ ಯಾಗಿದೆ; ಅದಕಾರಣ ಇದಕ್ಕೆ ತಾವು ಉತ್ತರ ಕೊಡಬೇಕು.

ಶ್ರೀ ಬಿ. ಪುಟ್ಟಸ್ವಾಮಯ್ಯ:— ಈ ರೀತಿ ಹುಡುಗರ ಮಧ್ಯೆ ಗಲಾಟೆ ಯಾಗುತಿರುವುದಕ್ಕೆ ಡಿ.ಡಿ. ಮತ್ತು ಕೆ.ಹೆಚ್. ಇವರ ನಡುವೆ ಇರುವವೈತ್ಯಾಸವೇ ಕಾರಣ ಎಂದು ಹೊರಗಡೆ ಕೆಲವರು ಹೇಳು ತ್ತಿದ್ದಾರೆ?

ಶ್ರೀ ಡಿ ದೇವರಾಜ ಅರಸ್;— ಅವರಿವರ ವಿಚಾರ ನಿಮಗೆ ಏತಕ್ಕೆ ಬೇಕು ? ನಿಮ್ಮ ಮನೆಯ ಸಂಸಾರ ನೀವು ನೋಡಿಕೊಳ್ಳಿ; ಇದರಲ್ಲಿ ನೀವು ಏನೇ ಹೇಳಿದರೂ ಸಹ ಅದರಿಂದ ನಿಮಗೇನೂ ಪ್ರಯೋಜನ ವಾಗುವುದಿಲ್ಲ,

Food Poisoning in a Hospital in Rajajinagr.

SRI M.S. KRISHNAN.— Sir, I have sent notice of an. Adjournment motion. It is a very important matter. I would like to convince the Chair about it. Two people have died and 40 others poisoned by the food provieded by the Hospital in Rajajinagar and the milk supplied by Bangalore Dairy, If this is the position, where can patients go? It reflects very badly upon the Government. It calls upon the Government to take immediate action.

MR. DEPUTY SPEAKER.— I have understood the Hon. member. I have converted it as a Call Attention Notice, and it will be taken up as early as possible.

Let as now go the Financial Business-Discussion on Demands,

Stoppage of Auction Sells of Copra at Tiptur.

ಶ್ರೀ ಟಿ.ಎಂ ಮಂಜುನಾಥ್ (ತಿಪಟೂರು): — ಸ್ವಾಮಿ, ನಾನು ಕ್ವೆಶ್ಚನ್ ನಂಬರ್ ೨೩೧ ರ ಪ್ರಕಾರ ತಮಗೆ ಒಂದು ನೋಟೀಸ್ ಕಳಿಸಿಕೊಟ್ಟಿದ್ದೇನೆ. ಈಗ ತಿಪಟೂರಿನಲ್ಲಿ ಕೊಬ್ಬರಿ ಹರಾಜು ನಿಂತು ಹೋಗಿ; ನಾನು ನನ್ನ ಕ್ಷೇತ್ರಕ್ಕೆ ಹೋಗಿ ನೋಡಿದಾಗ ಇದರಿಂದ ರೈತರಿಗೆ ತುಂಬಾ ತೊಂದರೆಯಾಗಿರುವುದು ಕಂಡು ಬಂತು, ಸುಮಾರು ಹತ್ತು ಸಾವಿರ ಜನರು ಕಷ್ಟಕ್ಕೆ ಸಿಕ್ಕಿದ್ದಾರೆ ಅವರಿಗೆ ಬೇರೆ ಕಡೆಗಳಲ್ಲಿ ಹಣದ ಸಹಾಯ ಸಿಗುತ್ತಿಲ್ಲ,

ಉಪಾಧ್ಯಕ್ಷರು: — ನಾನು ಅದನ್ನು ನೋಡುತ್ತೇನೆ,

Budget Estimeates for 1975-76 Demands for Grants.

Demand Nos: 18 19,27,53 54 and 40

† ಶ್ರೀ ಕೆ.ಎಂ. ರುದ್ರಪ್ಪ (ಸಕಲೇಶಪುರ) — ಮಾನ್ಯ ಸಭಾಧ್ಯಕ್ಷರೇ, ಮಾನ್ಯ ಲೋಕೋಪಯೋಗಿ ಸಚಿವರಾದ ಶ್ರೀಮಾನ್ ಚನ್ನಬಸಪ್ಪನವರು ಮಂಡಿಸಿರುವ ೧೮,೧೯,೨೭,೫೩ ಮತ್ತು ೫೪ನೇ ಡಿಮ್ಯಾಂಡಗಳನ್ನು ಹಾಗೂ ಮಾನ್ಯ ನಾಗರಾಳ ಅವರು ಮಂಡಿಸಿರುವ ೪೦ನೇ ಡಿಮ್ಯಾಂಡನ್ನು ನಾನು ಸಂಪೂರ್ಣವಾಗಿ ಬೆಂಬಲ ಮಾಡುತ್ತಾ ಕೆಲವು ವಿಷಯಗಳನ್ನು ಹೇಳಬಯಸುತ್ತೇನೆ. ನಮ್ಮ ರಾಜ್ಯದಲ್ಲಿ ಬಹುಮುಖ್ಯವಾಗಿ ರಸ್ತೆ ಸಂಚಾರ ಸೌಲಭ್ಯ ಹೆಚ್ಚು ಹೆಚ್ಚು ಆಗಬೇಕಾಗಿದೆ; ಇದಕ್ಕೆ ಕಾರಣ ನಮ್ಮ ಕರ್ನಾಟಕ ರಾಜ್ಯದಲ್ಲಿ ರೈಲ್ವೇ ಮಾರ್ಗ ಹೆಚ್ಚು ಪ್ರಯೋಜನಕಾರಿಯಾಗಿಲ್ಲ; ನಮ್ಮ ರಾಜ್ಯದಲ್ಲಿ ೭೫೭ ಕಿಲೋಮೀಟರ್ ರೈಲ್ವೇ ಮಾರ್ಗ ವಿದೆ. ಇದನ್ನು ಇಡೀ ದೇಶದ ರೈಲ್ವೇ ಮಾರ್ಗಕ್ಕೆ ಹೋಲಿಕೆ ಮಾಡಿ ನೋಡಿದರೆ ಬಹಳ ಕಡಿಮೆ ಎಂದು ಹೇಳ ಬಹುದು; ಈಗ ಒಂದು ಸಾವಿರ ಕಿಲೋಮೀಟರ್‌ಗೆ ಕೇವಲ ೧೪ ಕಿ.ಮೀ ಳ ಮಾತ್ರ ರೈಲ್ವೇ ಮಾರ್ಗ ವನ್ನು ರಾಜ್ಯದಲ್ಲಿದೆ. ಆದರೆ ಆಲ್-ಇಂಡಿಯಾ ಮಟ್ಟದಲ್ಲಿ ಒಂದು ಸಾವಿರ ಕಿಲೋಮೀಟರ್‌ಗೆ ೨೮ ಕಿಲೋ ಮೀಟರ್ ಇದೆ. ಮತ್ತು ಈಗ ಇರತಕ್ಕಂಥ ರೈಲ್ವೇ ಮಾರ್ಗ ಸಹ ಹೆಚ್ಚು ಪ್ರಯೋಜನಕಾರಿಯಾಗಿಲ್ಲ, ಬ್ರಾಡ್‌ಗೇಜ್ ಮಾರ್ಗ ಕಡಿಮೆ ಇದೆ. ಮುಂಬೈನಿಂದ ಪೂನ್ನಾ ಮಾರ್ಗವಾಗಿ ವೀರಜ್‌ವರೆಗೆ ಬ್ರಾಡ್‌ಗೇಜ್ ಇದೆ ಅದನ್ನು ಬೆಂಗಳೂರುವರೆಗೆ ಮುಂದುವರೆಸಬಹುದಾಗಿತ್ತು, ಆದರೆ ನಮ್ಮ ಸರ್ಕಾರದವರು ಅದಕ್ಕೆ ಹೆಚ್ಚು ಒತ್ತಾಯ ಮಾಡಲಿಲ್ಲ. ಹಿಂದೆ ರೈಲ್ವೇ ಮಂತ್ರಿಗಳಾಗಿದ್ದ ಎಸ್ ನಿ ದಾಸಪ್ಪನವರ ಕಾಲದಲ್ಲಿ ಹಾಸನ ಮಂಗಳೂರು ರೈಲ್ವೇ ಮಾರ್ಗ ಪ್ರಾರಂಭವಾಯಿತು ಆದರೆ ಆ ಕೆಲಸ ಕೂಡ ತೀವ್ರಗತಿಯಲ್ಲಿ ಮುಂದುವರೆಯುತ್ತಿಲ್ಲ, ಈ ಕಾರಣದಿಂದ ನಾವು ರಸ್ತೆ ಸಂಚಾರದ ಸೌಲಭ್ಯದ ಕಡೆಗೆ ಹೆಚ್ಚು ಗಮನ ಕೊಡ ಬೇಕಾಗಿದೆ ರಸ್ತೆ ವಿಷಯದಲ್ಲಿ ಹೇಳುವುದಾದರೆ ನಮ್ಮ ರಾಜ್ಯದಲ್ಲಿ ಒಟ್ಟು ೭೯,೯೪೭ ಕಿಲೋಮೀಟರ್ ಉದ್ದದ ರಸ್ತೆ ಇದೆ. ಇದಕ್ಕೆ ಏಜೆನ್ಸಿಗಳು ಯಾವುವು ಎಂದರೆ, ಲೋಕೋಪಯೋಗಿ ಇಲಾಖೆ, ತಾಲ್ಲೂಕ್ ಬೋರ್ಡ್‌ಗಳು ಮತ್ತು ಅರಣ್ಯ ಇಲಾಖೆ. ಲೋಕೋಪಯೋಗಿ ಇಲಾಖೆಯವರು ೫೭ ಸಾವಿರ ಕಿಲೋ ಮೀಟರ್, ತಾಲ್ಲೂಕ್ ಬೋರ್ಡಿನವರು ೨೫ ಸಾವಿರ ಕಿಲೋಮೀಟರ್ ಅರಣ್ಯ ಇಲಾಖೆಯವರು ೨೭೧೪ ಕಿಲೋ ಮೀಟರ್ ರಸ್ತೆಯ ಮೇನೆಟೇನ್ ಮಾಡುತ್ತಿದ್ದಾರೆಂದು ಅಂಕಿ ಅಂಶಗಳಿಂದ ತಿಳಿದುಬರುತ್ತಿದೆ. ಲೋಕೋಪಯೋಗಿ ಇಲಾಖೆಯಲ್ಲಿ ಬಹಳ ತಜ್ಞ ರಾದಂಥ ಅಧಿಕಾರಿಗಳಿದ್ದಾರೆ. ಆದರೆ ರಸ್ತೆಯ ಮೇನೆಟೆನೆನ್ಸ್ ನೋಡಿದರೆ ಅಷ್ಟು ತೃಪ್ತಿಕರವಾಗಿಲ್ಲ. ಇದಕ್ಕೆ ಅವರು ಕೊಡುವ ಕಾರಣವೆಂದರೆ, ರಸ್ತೆಗಳ ಬಾಬಿಗೆ ಕೊಡುತ್ತಿರುವ ಹಣ ಕಡಿಮೆ ಎಂದು, ಜನರಲ್ಲಿ ಇಕಾನಮಿ ಇರುವುದರಿಂದ ಹೆಚ್ಚು ಹಣ ಕೊಡುವುದಕ್ಕಾಗುವುದಿಲ್ಲವೆಂದು ನಮ್ಮ ಮಾನ್ಯ ಮಂತ್ರಿಗಳು ಹೇಳುತ್ತಿದ್ದಾರೆ, ಆದರೆ ಹಳ್ಳಿಯ ಜನರು ತಮಗೆ ಮುಖ್ಯವಾಗಿ ರಸ್ತೆ ಸೌಕರ್ಯ, ಕುಡಿಯುವ ನೀರಿನ ಸೌಕರ್ಯ, ಮತ್ತು ಕಣ್ಣು ಕೆರೆಗಳ ವಿಶೇಷ ಕೆಲಸವಾಗಬೇಕೆಂದು ಕೇಳುತ್ತಾರೆ. ಆದಕಾರಣ ಸರ್ಕಾರದವರು ಜನರಲ್ ಇಕಾನಮಿಯನ್ನು ಕೇವಲ ಹಳ್ಳಿಯ ಜನರಿಗೆ ಅನ್ವಯ ಮಾಡಿದರೆ ಅದು ದೊಡ್ಡ ತಪ್ಪಾಗುತ್ತ ದೆಂದು ಹೆಳುತ್ತೇನೆ. ಈಗ ಸರ್ಕಾರದವರು ಹಣದ ಕೊರತೆ ಇರಲಿ, ಇಲ್ಲದಿರಲಿ, ಸರ್ಕಾರೀ ನೌಕರರ ಡಿ ಎ ಹೆಚ್ಚು ಮಾಡುತ್ತಿರುತ್ತಾರೆ, ದೊಡ್ಡ ದೊಡ್ಡ ಅಧಿಕಾರ ವರ್ಗಗಳನ್ನು ನಿರ್ಮಾಣಮಾಡುತ್ತಿದ್ದಾರೆ. ಬಹುಮುಖ್ಯವಾಗಿ ಈ ಇಲಾಖೆಯ ಬಗ್ಗೆ ಬೇಕೆಂದರೆ, ನಮ್ಮ ರಾಜ್ಯದಲ್ಲಿ ಈಗ ೧೨ ಜನ ಚೀಫ್ ಇಂಜಿನಿ-ಯರ್‌ಗಳಿದ್ದಾರೆ ಸುಮ್ಮ ಇಲಾಖೆಯಾದ ಅರಣ್ಯ ಇಲಾಖೆಯಲ್ಲಿ ೫ ಜನ ಚೀಫ್-ಕನ್ಸರ್‌ವೇಟರ್ ಆಫ್ ಫಾರೆಸ್ಟ್ ಇದ್ದಾರೆ. ಇದೇ ರೀತಿ ಎಲ್ಲ ಇಲಾಖೆಗಳಲ್ಲಿಯೂ ದೊಡ್ಡ ದೊಡ್ಡ ಅಧಿಕಾರ ವರ್ಗದವರನ್ನು ನಿರ್ಮಾಣ ಮಾಡಿಕೊಂಡು ಹೋಗುತ್ತಿದ್ದಾರೆ, ಇಂತಹ ಕಡೆಗಳಲ್ಲಿ ಇಕಾನಮಿಯನ್ನು ಸರ್ಕಾರದವರು ಪ್ರಯೋಗ ಮಾಡಬೆ. ಕೇವಲ ರೈತರಿಗೆ ಅನುಕೂಲವಾಗುವ ಕಡಗಳಲ್ಲಿ ಮಾತ್ರ ಜನರಲ್ ಇಕಾನಮಿಯನ್ನು ಉಪಯೋಗ ಮಾಡಿರುವುದರಿಂದ ಅಭಿವೃದ್ಧಿ ಕಾರ್ಯಗಳು ಕುಂಠಿತವಾಗುತ್ತಿವೆ. ಅದು ತಪ್ಪು ಎಂದು ಹೇಳುತ್ತೇನೆ. ಶ್ರೀಮಾನ್ ಚನ್ನಬಸಪ್ಪನವರು ಈ ಸಲ ಮಂತ್ರಿಗಳಾದ ತರುವಾಯದಲ್ಲಿ ಗ್ರಾಮಾಂತರ ರಸ್ತೆ